ಅಧ್ಯಕ್ಷರು:- ಇವೊತ್ತಿಗೆ ಅವಕಾಶ ಕೊಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ:- ನನಗೆ ಉತ್ತರ ಬಂದಿಲ್ಲ. ಅದು ಏನೆಂದು ನೀವೇ ಹೇಳಬೇಕು. ಅದು ಏನು ಉತ್ತರ ಹೇಳುತ್ತೀರೋ ಹೇಳಿ. ಆಮೇಲೆ ಕೇಳುತ್ತೇನೆ. ಅದು ನೋಡಿದ ಮೇಲೆ ಕೇಳುತ್ತೇನೆ.

ಡಾ॥ ಹೆಚ್.ಸಿ.ಮಹಾದೇವಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಬೆಳಗ್ಗೆ ಸದನಕ್ಕೆ ಉತ್ತರ ಕೊಡಿಸಲಾಗಿದೆ. ನಾಲ್ಕು ಗಂಟೆಗೆ ತಾವು ಕೊಡಬೇಕೆಂದು ಹೇಳಿದ್ದರಿಂದ ಮಾನ್ಯ ಸದಸ್ಯರಿಗೆ ತಲುಪಿಸಲಾಗಲಿಲ್ಲ.

ವಿಷಯ:- ಬೀದರ್ ಜಿಲ್ಲೆಯಲ್ಲಿ ಇತ್ತೀಚೆಗೆ ಕಾಲರಾ ಹರಡಿದ ಹಿನ್ನೆಲೆಯಲ್ಲಿ ಕಾಲರಾ ನಿರೋಧಕ ಔಷಧಿಗಳನ್ನು ಖರೀದಿಸುವಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ.

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ :240(1941)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಬೀದರ್ ಜಿಲ್ಲೆಯ ಬಹುತೇಕ ಸ್ಥಳಗಳಲ್ಲಿ ಇತ್ತೀಚೆಗೆ ಕಾಲರಾ ಉಂಟಾಗಿದ್ದುದು. ನಿಜವಲ್ಲವೇ?

ಆ)ಕಾಲರಾ ನಿರೋಧಕ ಔಷಧಿಗಳನ್ನು ಈ ಸಂಬಂಧವಾಗಿ ಸ್ಥಳೀಯವಾಗಿ ಖರೀದಿ ಮಾಡಿದುದು ನಿಜವಲ್ಲವೇ?

ಇ)ಹಾಗಿದ್ದಲ್ಲಿ ಎಷ್ಟು ಮೊತ್ತದ ಔಷಧಿಗಳನ್ನು ಸ್ಥಳೀಯವಾಗಿ ಖರೀದಿ ಮಾಡಲಾಗಿತ್ತು?

ಈ)ಸ್ಥಳೀಯವಾಗಿ ಔಷಧಿಗಳನ್ನು ಕೊಂಡುಕೊಳ್ಳಲು 'ಡ್ರಗ್ ಕೌನ್ಸಿಲ್'ಅನುಮತಿ ನೀಡಿದೆಯೇ?

ಉ)ಔಷಧಿಗಳನ್ನು ಯಾವ ಯಾವ ಸಂಸ್ಥೆಗಳಿಂದ ಕೊಳ್ಳಲಾಯಿತು. ಔಷಧಿಗಳನ್ನು ಕೊಳ್ಳುವ ಮುನ್ನ ನಿಯಮಾನುಸಾರ ಕೊಟೇಷನ್‌ಗಳನ್ನು ಕರೆಯಲಾಗಿತ್ತೇ?

ಊ)ಔಷಧಿ ನಿಯಂತ್ರಣ ಪರಿಷತ್ತಿನಿಂದ ಅನುಮತಿ ಪಡೆಯದೇ ಔಷಧಿಗಳನ್ನು ಖರೀದಿ ಮಾಡಿರುವ ಹಿನ್ನೆಲೆಯಲ್ಲಿ ತನಿಖೆ ನಡೆಸಲಾಗುತ್ತದೆಯೇ?

ಋ)ಹಾಗಿದ್ದಲ್ಲಿ ಇದುವರೆಗೆ ಎಷ್ಟು ಜನ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ?

ಋು)ಈ ಔಷಧಿಗಳ ಖರೀದಿಯ ಹಿನ್ನೆಲೆಯಲ್ಲಿ ಅವ್ಯವಹಾರ ನಡೆದಿದೆ ಎನ್ನಲಾಗಿದ್ದು ನಿಜವೇ? ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ)ನಿಜ. 17 ಜನರಿಗೆ ಕಾಲರಾ ಎಂದು ಗುರುತಿಸಲಾಗಿ ಜಿಲ್ಲೆಯಲ್ಲಿ ಒಟ್ಟು 1- 1- 95ರಿಂದ 31- 8- 95ರವರೆಗೆ 1477 ಕರುಳುಬೇನೆ ಪ್ರಕರಣಗಳು ವರದಿಯಾಗಿ 34 ಮರಣ ಸಂಭವಿಸಿರುತ್ತದೆ. ಅದರಲ್ಲಿ ಜುಲೈ ಮತ್ತು ಆಗಸ್ಟ್ 95ರಲ್ಲಿ ಒಟ್ಟು 1146 ಪ್ರಕರಣ ವರದಿಯಾಗಿದ್ದು 30 ಮರಣ ಹೊಂದಿರುತ್ತದೆ. ಕಾಲರಾದಿಂದ ಮರಣ ಸಂಭವಿಸಿರುವುದಿಲ್ಲ.

ಆ) ಅವಶ್ಯಕತೆ ಇದ್ದಾಗೆ ಮಾತ್ರ ಖರೀದಿ ಮಾಡಲಾಗುತ್ತದೆ.

ಇ) ಆಗಸ್ಟ್ ತಿಂಗಳಲ್ಲಿ ರೂ. 9,937.00

ಈ) ಜಿಲ್ಲಾ ಪಂಚಾಯತ್ ಕಾರ್ಯಾಲಯ, ಬೀದರ್, ಇವರಿಂದ ಅಪ್ಪಣೆ ಪಡೆದು ಖರೀದಿಸಲಾಗಿದೆ. ಹಾಗೂ ಆರೋಗ್ಯ ಸ್ಥಾಯಿ ಸಮಿತಿಯ ಅಧ್ಯಕ್ಷರು, ಜಿಲ್ಲಾ ಪಂಚಾಯತ್ ಇವರ ಅನುಮೋದನೆ ಮೇರೆಗೆ ಮಾಡಲಾಗಿದೆ.

ಉ) ಮೆ: ಎಂ.ಎಸ್.ತಿರುಮಲಾ ಮೆಡಿಕಲ್ಸ್ ಮತ್ತು ಜನರಲ್ ಸ್ಟೋರ್ಸ್, ಬೀದರ್, ಇವರಿಂದ ಖರೀದಿಸುವ ಮುನ್ನ ನಿಯಮಾನುಸಾರವಾಗಿ ಕೋಟೇಷನ್ ಕರೆದು ಖರೀದಿಸಲಾಗಿದೆ.

ಊ) ಕಾಲರಾ ಔಷಧಿ ಖರೀದಿ ಬಗ್ಗೆ ಯಾವುದೇ ತನಿಖೆ ನಡೆದಿಲ್ಲ.

ಋ) ಪ್ರಶ್ನೆ ಉದ್ಭವಿಸುವುದಿಲ್ಲ.

ಋೂ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ:- ಸನ್ಮಾನ್ಯ ಅಧ್ಯಕ್ಷರೇ, ಅಲ್ಲಿ ಲೋಕಲ್‌ನಲ್ಲಿ ಕೆಲವು ಔಷಧಿಗಳನ್ನು ಖರೀದಿ ಮಾಡಿದ್ದಾರೆ. ಆ ಔಷಧಿಗಳು ಸರಿ ಇಲ್ಲವೆಂದು ಜಿಲ್ಲಾ ಪಂಚಾಯತ್‌ನವರು ಒಂದು ಸಮಿತಿ ಮಾಡಿ ಅದನ್ನು ಎನ್‌ಕ್ವಾಯರಿ ಮಾಡಿದ್ದಾರೆ. ಮಾಡಿ ಅದನ್ನು ಸಿ.ಒ.ಡಿ.ಗೆ ಹಾಕಬೇಕು ಎಂದು ಶಿಫಾರಸ್ಸು ಮಾಡಿದ್ದಾರೆ. ಬಹಳ ಅವ್ಯವಹಾರ ಇದರಲ್ಲಿ ನಡೆದಿದೆ ಎಂದು ತಿಳಿದು ಬಂದಿದೆ. ಅದಕ್ಕೆ ಒಂದು ಹಂತದಿಂದ ಕ್ರಮ ತೆಗೆದುಕೊಂಡಿದ್ದೀರಾ? ಅವ್ಯವಹಾರದ ಬಗ್ಗೆ ಸಿ.ಒ.ಡಿ.ಎನ್‌ಕ್ವಯರಿ ತಾವು ಮಾಡುತ್ತೀರಾ ? ಅದರಲ್ಲಿ ಬಹಳ ದೊಡ್ಡ ದೊಡ್ಡವರು ಸೇರಿದ್ದಾರೆ ಎಂದು ತಿಳಿದು ಬಂದಿದೆ. ಹೆಸರು ಹೇಳುವುದು ಬೇಡ. ಅದರಲ್ಲಿ ಯಾರ್ಯಾರು ಸೇರಿದ್ದಾರೆ, ಏನಾಗಿದೆ ಎಂಬುದನ್ನು ತಾವು ಸಿ.ಒ.ಡಿ.ಎನ್‌ಕ್ವಾಯರಿ ಮಾಡಿ ತಕ್ಷಣ ಅದರ ಬಗ್ಗೆ ವ್ಯವಸ್ಥಿತ ಕ್ರಮ ತೆಗೆದುಕೊಳ್ಳುತ್ತೀರೊ ಎನ್ನುವುದು ಒಂದು. ಆಮೇಲೆ ಅಲ್ಲಿ ಹಳ್ಳಿಗಳಲ್ಲಿ ಎಲ್ಲೂ ಔಷಧಿಗಳು ಇರಲಿಲ್ಲ. ಯಾವಾಗ ಕಾಲರಾ ಶುರು ಆಯಿತು ಆವಾಗ ಅಲ್ಲಿ ಔಷಧಿ ಇರಲಿಲ್ಲ. ಆ ಮೇಲೆ ಎಲ್ಲಿಂದ ತಂದರು ಏನು ಮಾಡಿದರು ಎಂಬ ವ್ಯವಹಾರದ ಬಗ್ಗೆ ಒಂದು ಸಮಿತಿ ಮಾಡಿ, ಸಮಿತಿಯು ಎನ್‌ಕ್ವಾಯರಿ ಮಾಡಿ ಜಿಲ್ಲಾ ಪರಿಷತ್ತಿನಲ್ಲಿ ಬಂದಿತ್ತು. ಪರಿಷತ್ತಿನಲ್ಲಿ ಸಮಿತಿ ವರದಿ ಕೊಟ್ಟಿದೆ. ಸಿ.ಒ.ಡಿ ಎನ್‌ಕ್ವಾಯರಿ ಮಾಡಿ ಎಂದು ಹೇಳಿದ್ದಾರೆ. ಅದನ್ನು ಹಾಗೆಯೇ ಚೀಫ್ ಸೆಕ್ರೆಟರಿಯವರು ಮುಚ್ಚಿಟ್ಟಿದ್ದಾರೆ. ಅದಕ್ಕೆ ಏನೂ ಮಾಡಿಲ್ಲ. ಅದಕ್ಕೆ ತಾವು ಏನಾದರು ಮಾಡಿ ಸಿ.ಒ.ಡಿ ಎನ್‌ಕ್ವಯರಿ ಮಾಡುತ್ತೀರಾ ಎಂಬುದರ ಬಗ್ಗೆ ಖಚಿತವಾದ ಉತ್ತರ ತಾವು ಹೇಳಬೇಕು.

ಡಾ: ಹೆಚ್.ಸಿ.ಮಹಾದೇವಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಬೀದರ್ ಜಿಲ್ಲೆಯಲ್ಲಿ ಕರಳು ಬೇನೆ ಜರುಗಿದಂಥ ಸಂದರ್ಭದಲ್ಲಿ ನಾನು ಖುದ್ದಾಗಿ ಆ ಜಿಲ್ಲೆಗೆ ಹೋಗಿದ್ದೆ. ಕರಳು ಬೇನೆಯನ್ನು ತಡೆಹಿಡಿಯಲಿಕ್ಕೆ ಬೇಕಾದಂಥ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಿಕ್ಕೆ ನಮ್ಮ ಅಧಿಕಾರಿಗಳಿಗೆ ನಾನು ಸೂಚನೆ ಕೊಟ್ಟು ಬಂದಿದ್ದೆ. ಏನು ಮಾನ್ಯ ಸದಸ್ಯರು ವ್ಯಕ್ತ ಮಾಡಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಔಷಧಿಗಳನ್ನು ಖರೀದಿ ಮಾಡುವ ಸಂಬಂಧದಲ್ಲಿ ಅವ್ಯವಹಾರಗಳು ನಡೆದಿವೆ ಅದಕ್ಕೆ ಜಿಲ್ಲಾಪಂಚಾಯತ್ ವತಿಯಿಂದ, ಒಂದು ಸಮಿತಿಯನ್ನು ಮಾಡಿದ್ದಾರೆ, ಎಂದು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತರುತ್ತಿದ್ದಾರೆ ಅದರ ಬಗ್ಗೆ ಜಿಲ್ಲಾಪಂಚಾಯತ್‌ವತಿಯಿಂದ

ಹಾಗೂ ನಮ್ಮ ಗುಲ್ಬರ್ಗಾ ವಿಭಾಗದ ಜಂಟಿ ನಿರ್ದೇಶಕರಿಂದ ವರದಿಯನ್ನು ತರಿಸುತ್ತೇನೆ. ವರದಿಗಾಗಿ ಕಾಯುತ್ತಿದ್ದೇವೆ. ಆ ವರದಿಯನ್ನು ತರಿಸಿಕೊಂಡು ಅವ್ಯವಹಾರಗಳು ನಡೆದಿದ್ದ ಸಂದರ್ಭದಲ್ಲಿ ಸರ್ಕಾರ ಅವರ ವಿರುದ್ಧ ಕ್ರಮವನ್ನು ಕೈಗೊಳ್ಳುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಹೇಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ:- ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಅಲ್ಲಿಯ ಚೀಫ್ ಸೆಕ್ರೆಟರಿಯವರು ಅದನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಅವರು ಅಲ್ಲಿಂದ ಕಳುಹಿಸುವುದಿಲ್ಲ, ತಾವೇ ಏನಾದರೂ ಅಲ್ಲಿಂದ ತರಿಸಿಕೊಳ್ಳುತ್ತೀರಾ? ಅವರು ಸಮಿತಿ ರಿಪೋರ್ಟನ್ನು ಹಾಗೆಯೇ ಇಡುತ್ತಾರೆ. ಆದಕಾರಣ ತಾವು ಇದನ್ನು ತಕ್ಷಣ ತರಿಸಿಮಾಡಬೇಕು ಎಂದು ಹೇಳುತ್ತೇನೆ.

ಡಾ॥ ಹೆಚ್.ಸಿ.ಮಹಾದೇವಪ್ಪ:- ಸನ್ಮಾನ್ಯ ಅಧ್ಯಕ್ಷರೇ, ವರದಿಯನ್ನು ನಾನು ತರಿಸಿಕೊಂಡು ಅವ್ಯವಹಾರಗಳು ನಡೆದಿರತಕ್ಕಂಥ ಸಂದರ್ಭದಲ್ಲಿ ನಾನು ಖಂಡಿತ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು:- ಸನ್ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ, ಅಲ್ಲಿಯ ಮುಖ್ಯ ಕಾರ್ಯದರ್ಶಿಗಳು ಯಾರು ಇದ್ದಾರೆ, ಅಥವಾ ಅಲ್ಲಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾರು ಇದ್ದಾರೆ ಅವರ ಮೇಲೆ ಖಚಿತವಾದ ಆರೋಪವನ್ನು ಮಾಡುತ್ತಿದ್ದಾರೆ. ಆ ವರದಿಯನ್ನು ತರಿಸುವಾಗ ಅವರ ಮೇಲೆ ಅವಲಂಬಿತರಾಗುವುದು ಬೇಡ. ನೇರವಾಗಿ ನಿಮ್ಮ ಉಸ್ತುವಾರಿಯಲ್ಲಿ ವರದಿಯನ್ನು ತರಿಸಿಕೊಳ್ಳಿ, ನಿಷ್ಪಕ್ಷಪಾತವಾದ ವರದಿ ಬರುತ್ತದೆ ಎಂದು ಅವರ ಕಳಕಳಿ.

ಡಾ॥ ಹೆಚ್.ಸಿ.ಮಹಾದೇವಪ್ಪ:- ಅದಕ್ಕೆ ಸೂಕ್ತವಾದ ವ್ಯವಸ್ಥೆ ಮಾಡುತ್ತೇನೆ.

ಡಾ॥ ಜೀವರಾಜ ಆಳ್ವ:- ಎರಡು ಪ್ರಶ್ನೆಗಳು ಇವೆ. ಒಂದು ಸನ್ಮಾನ್ಯ ಸಭಾಧ್ಯಕ್ಷರಿಗೆ, ಸಭಾಧ್ಯಕ್ಷರ ಪ್ರಶ್ನೆ ಏನು ಎಂದರೆ ಒಂದು ಪ್ರಶ್ನೆ ಕೇಳಲಿಕ್ಕೆ, ಉತ್ತರ ಬರಲಿಕ್ಕೆ ಎಷ್ಟು ಖರ್ಚಾಗುತ್ತದೆ. ಎರಡನೇ ಪ್ರಶ್ನೆ ಮಂತ್ರಿಗಳಿಗೆ. ಆಗಸ್ಟ್ ತಿಂಗಳಲ್ಲಿ ಇಷ್ಟು ದೊಡ್ಡ ತೀವ್ರತರವಾದ 1477 ಕರಳು ಬೇನೆ ಪ್ರಕರಣಗಳು, ಒಟ್ಟು 34 ಮರಣ, 1146 ವರದಿಯಾಗಿದ್ದು 30 ಮರಣ ಎಂದು ಪುನಃ ಹಾಕಿದ್ದಾರೆ, ಸದರಿ ಖರ್ಚು 9937 ಎಂದು ಇದೆ ಅದು ತಮಗೆ ಸಮಾಧಾನವಾಗಿದೆಯೆ?

ಡಾ॥ ಹೆಚ್.ಸಿ.ಮಹಾದೇವಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಸಾಂಕ್ರಾಮಿಕ ರೋಗಗಳು ಸಾಮಾನ್ಯವಾಗಿ ಅಭಿವೃದ್ಧಿಶೀಲ ರಾಷ್ಟ್ರವಾದಂಥ ಭಾರತದೇಶದಲ್ಲಿ ಸರ್ವೇ ಸಾಮಾನ್ಯವಾಗಿ ಬರತಕ್ಕಂಥದ್ದು.

ಅಧ್ಯಕ್ಷರು:- ನನಗೆ ಒಂದು ಪ್ರಶ್ನೆಯನ್ನು ಕೇಳಿದ್ದೀರಿ, ಅದರ ಲೆಕ್ಕ ಹಾಕಿಬಿಟ್ಟು including the savings we made by your frequent absence ನಾನು ಡೀಟೈಲ್ಸ್ ಕೊಡುತ್ತೇನೆ.

ಡಾ॥ ಜೀವರಾಜ ಆಳ್ವ:- ಅಧ್ಯಕ್ಷರು ಪ್ರೊಟೆಕ್ಷನ್ ಕೊಡುತ್ತಿಲ್ಲ, ಅದಕ್ಕೆ ಸ್ವಲ್ಪ ಫ್ರಿಕ್ವೆಂಟ್ ಅಬ್ಸೆನ್ಸ್ ಆಗುತ್ತಿದ್ದೇನೆ.

ವಿಷಯ:- ಬಿಜಾಪುರ ಸಿವಿಲ್ ಆಸ್ಪತ್ರೆಯ ಬಗ್ಗೆ